ವಿಷಯ:- ಗುಳ್ಳೇದಗುಡ್ಡ ಮತ ಕ್ಷೇತ್ರದಲ್ಲಿ ಕಬ್ಬಿಣದ ಗಣಿ ವಿಚಾರ.

23(125)

ಶ್ರೀ ರಾಜಶೇಖರ ಶೀಲವಂತ (ಗುಳ್ಳೇದ ಗುಡ್ಡ):- ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಗುಳೇದಗುಡ್ಡ ಮತ ಕ್ಷೇತ್ರದ ಹುನಗುಂದ ತಾಲ್ಲೂಕ್ ಹಿರೇಮಾಗಿ ಹತ್ತಿರ ಇರುವ ಕಬ್ಬಿಣ ಗಣಿಯು ಸರ್ಕಾರದ ಅಧೀನದಲ್ಲಿದೆಯೇ; ಇಲ್ಲದಿದ್ದಲ್ಲಿ ಯಾರಿಗೆ ವಹಿಸಲಾಗಿದೆ;

ಆ) ಖಾಸಗಿ ಗುತ್ತಿಗೆದಾರರಿಗೆ ವಹಿಸಿಕೊಟ್ಟಿದ್ದಾರೆ ಹಿಂದಿನ ಮೂರು ವರ್ಷಗಳಲ್ಲಿ ಸರ್ಕಾರಕ್ಕೆ ಬಂದ ಆದಾಯವೆಷ್ಟು;

ಇ) ಕರಾರಿನ ಪ್ರಕಾರ ಖಾಸಗಿ ಗುತ್ತಿಗೆದಾರರಿಗೆ ಎಷ್ಟು ಎಕರೆಯನ್ನು ವಹಿಸಲಾಗಿದೆ;

ಈ) ಗುತ್ತಿಗೆದಾರರು ಮಾಡಿಕೊಂಡ ಕರಾರಿಗಿಂತಲೂ ಹೆಚ್ಚುವರಿ ಭೂಮಿಯನ್ನು ಅಗೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಗುತ್ತಿಗೆದಾರರೊಂದಿಗೆ ಹೊಸ ಕರಾರುಗಳನ್ನು ಮಾಡಿಕೊಳ್ಳಲಾಗಿದೆಯೇ?

ಶ್ರೀ ಎನ್. ಡಿ. ಜಯರಾಮ (ಗಣಿ ಮತ್ತು ಭೂ ವಿಜ್ಞಾನ ಸಚಿವರು):-

ಅ) ಇಲ್ಲ. ಮೆ: ದೊಡ್ಡಣ್ಣನವರ್ ಬ್ರದರ್ಸ್ ಎಂಬ ಖಾಸಗೀ ಸಂಸ್ಥೆಗೆ ಗಣಿ ಗುತ್ತಿಗೆ ನೀಡಲಾಗಿದೆ.

ಆ) ಸರ್ಕಾರಕ್ಕೆ ಬಂದ ಆದಾಯ ಈ ಕೆಳಕಂಡಂತಿದೆ;

1.	1993-94	ರೂ.	6,09,780.00
2.	1994-95	ರೂ.	12,15,499.00
3.	1995-96	ರೂ.	8,74,774.00
	ಒಟ್ಟು	ರೂ.	27,000,53.00

ಇ) ಒಟ್ಟು 271 1/2 ಎಕರೆಗಳು.

ಈ) ಇಲ್ಲ. ಉದ್ಭವಿಸುವುದಿಲ್ಲ.

ಶ್ರೀ ರಾಜಶೇಖರ ಶೀಲವಂತ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ 1994-95ರಲ್ಲಿ 12,15,499 ರೂಪಾಯಿಗಳ ಆದಾಯ, 1995-96ರಲ್ಲಿ 8,74,744.00 ರೂಪಾಯಿಗಳ ಆದಾಯ ಬಂದಿದೆ. 1993-94ರಲ್ಲಿ ಹಾಗೂ 1995-96ನೇ ಸಾಲಿನಲ್ಲಿ ಸರಕಾರಕ್ಕೆ ಬರುವ ಆದಾಯವು ಕಡಿಮೆ ಏಕೆ ಆಯಿತು ಮತ್ತು ಯಾವರೀತಿಯ ಒಡಂಬಡಿಕೆಯ ಮೇಲೆ ಈ ಭೂಮಿಯನ್ನು ಕೊಟ್ಟಿದ್ದಾರೆ ಎಂಬ ಬಗ್ಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಡಿ. ಜಯರಾಂ:- ಮಾನ್ಯ ಅಧ್ಯಕ್ಷರೇ, 1994-95ರಲ್ಲಿ 12,15,499 ರೂಪಾಯಿಗಳ ಆದಾಯವು ಬಂದಿದೆ. 1995-96ರಲ್ಲಿ ಸುಮಾರು 8,74,774 ರೂಪಾಯಿಗಳ ಆದಾಯವು ಬಂದಿರುವುದು ನಿಜವಾಗಿದೆ. ಇಡೀ ರಾಜ್ಯದಲ್ಲಿಯೇ 1995-96ರಲ್ಲಿ ಆದಾಯವು ಕಡಿಮೆಯಾಗಿತ್ತು. ಏಕೆಂದರೆ ಜೆ ಎಲ್‌ಪಿ ಕಮಿಟಿಯು ಈ ಬಗ್ಗೆ ಪರಿಶೀಲಿಸುತ್ತಿದ್ದುದರಿಂದ ಸ್ವಲ್ಪ ವ್ಯವಹಾರ ಕುಂಠಿತವಾಯಿತು. ಆದ್ದರಿಂದ ಮುಂದೆ ಈ ರೀತಿ ಕಡಿಮೆಯಾಗುವುದಿಲ್ಲವೆಂದು ಭಾವಿಸುತ್ತಾ, ಅದೇ ರೀತಿಯಲ್ಲಿ ಕರಾರಿನ ಪ್ರಕಾರ ಖಾಸಗಿ ಗುತ್ತಿಗೆದಾರರಿಗೆ 271.5 ಏಕರೆಗಳನ್ನು ಗುತ್ತಿಗೆ ಕೊಡಲಾಗಿದೆ. ಅದೇ ರೀತಿ ಅವರು ರಾಯಲ್ಟಿಯನ್ನು ಕೊಟ್ಟಿದ್ದಾರೆ. ಗುತ್ತಿಗೆದಾರರು ಮಾಡಿಕೊಂಡ ಕರಾರಿಗಿಂತ ಹೆಚ್ಚುವರಿ ಭೂಮಿಯನ್ನು ಅವರು ಮಾಡಿಕೊಂಡಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದ್ಯಾವುದೂ ಕೂಡ ಹೆಚ್ಚುವರಿಯಾಗಿ ಮಾಡುತ್ತಿಲ್ಲ, ನಮ್ಮ ಗಮನಕ್ಕೂ ಬಂದಿಲ್ಲ. ಅದು ನನ್ನ ಗಮನಕ್ಕೆ ಬಂದರೆ ತತ್‌ಕ್ಷಣ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ರಾಜಶೇಖರ ಶೀಲವಂತ:- ಗಣಿಗಾರಿಕೆಯ ಬಗ್ಗೆ ಯಾವರೀತಿ ಒಡಂಬಡಿಕೆಯನ್ನು ಮಾಡಿಕೊಂಡಿದ್ದಾರೆಂಬ ಬಗ್ಗೆ ತಾವುಗಳು ವಿವರಗಳನ್ನು ಕೊಟ್ಟಿಲ್ಲ.

ಅಧ್ಯಕ್ಷರು:- ಅಂಥ ಒಡಂಬಡಿಕೆಗಳಿಗೆ ನಿಯಮಗಳು ಇರುತ್ತವೆ. ಪ್ರಿಸ್ಕೈಬ್ ಪ್ರೊಸೀಜರ್ಸ್ ಇರುತ್ತವೆ. ಅದರ ಪ್ರಕಾರವೇ ಮಾಡುತ್ತಾರೆ. ಮಾನ್ಯ ರಾಜಶೇಖರ್‌ರವರು ಹೊಸ ಸದಸ್ಯರು. ತಾವು ಕಡೆಯ ಉಪಪ್ರಶ್ನೆಯನ್ನು ಏನು ಕೇಳಿದ್ದೀರಿ ಅಂದರೆ, ಅವರು ಅಗ್ರಿಮೆಂಟ್‌ನಲ್ಲಿ ತೋರಿಸಿರುವುದಕ್ಕಿಂತ ಹೆಚ್ಚು ಪ್ರದೇಶವನ್ನು ಆಕ್ರಮಿಸಿಕೊಂಡಿದ್ದಾರೆ ಎಂಬ ಅಭಿಪ್ರಾಯವನ್ನು ವ್ಯಕ್ತಮಾಡಿದ್ದೀರಿ. ಸರಕಾರದವರು ಇಲ್ಲ ಎಂದು ಹೇಳಿದ್ದಾರೆ. ಆದುದರಿಂದ ನಿಮ್ಮ ಹತ್ತಿರ ಆ ಕುರಿತು ಏನಾದರೂ ಮಾಹಿತಿಗಳು ಇದ್ದರೆ ಅದನ್ನು ಅವರಿಗೆ ಒದಗಿಸಿಕೊಟ್ಟರೆ ಅವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಾರೆ. ಅವರು ಅಗ್ರಿಮೆಂಟ್‌ನಲ್ಲಿ ತೋರಿಸಿರತಕ್ಕಂಥಾದ್ದಕ್ಕಿಂತ ಹೆಚ್ಚು ಪ್ರದೇಶದಲ್ಲಿ ಗಣಿಗಾರಿಕೆ ಮಾಡುತ್ತಿದ್ದಾರೆಂಬ ಬಗ್ಗೆ ತಮ್ಮಲ್ಲಿ ಮಾಹಿತಿ ಇದೆಯೇ? ಇದ್ದರೆ ಕೊಡಿ..

ಶ್ರೀ ರಾಜಶೇಖರ ಶೀಲವಂತ:- ಮಾಹಿತಿಗಳನ್ನು ಒದಗಿಸಿಕೊಡುತ್ತೇನೆ.

ಶ್ರೀ ಎಸ್.ಡಿ. ಜಯರಾಂ:- ಮಾಹಿತಿಗಳನ್ನು ತಂದು ಕೊಟ್ಟರೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

MR. SPEAKER:- The Hon'ble Member Sri Basavanagowda Patil has sent a telegram saying he is sick. ಶ್ರೀ ಬಸವನಗೌಡ ಪಾಟೀಲ್ ಅವರಿಗೆ ನಾವು ಲೀವ್ ಗ್ರಾಂಟ್ ಮಾಡಬೇಕಾಗುತ್ತದೆ. ಆದ್ದರಿಂದ ಮಂಜೂರ್ಮಾಡಿದ್ದೇವೆ.

ವಿಷಯ:- ಸಕ್ಕರೆ ಶೆಟ್ಟರ ಜನಾಂಗದ ಸಮಗ್ರ ಅಭಿವೃದ್ಧಿಗೆ ಯೋಜನೆ.

25(229)

ಶ್ರೀ ವಾಟಾಳ್ ನಾಗರಾಜ್:- (ಚಾಮರಾಜನಗರ):- ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-